## ರಾತ್ರಿ ಹೋಮ

ನಾನು ಕಂಪ್ಯೂಟರ್ ಮುಂದೆ ಕುಳಿತು ಏನೋ ಮಾಡುತ್ತಿದ್ದೆ. ನಮ್ಮ ಮನೆಯಾಕೆ ಅಡುಗೆಮನೆಯಿಂದಲೇ 'ಮಠದಲ್ಲಿ... ಹೋಮ ಇದೆ, ಹೋಗಿ ಬರ್ತೀನಿ' ಅಂದಳು. ಅಲ್ಲಿ ರುಬ್ಬುವ ಯಂತ್ರ ಓಡುತ್ತಿತ್ತು. ನಾನು 'ಸರಿ, ಹೋಗು, ಅದಕ್ಕೇನಂತೆ?' ಅಂದೆ. ಸ್ವಲ್ಪ ಸಮಯ ಬಿಟ್ಟು ಮನೆಯಾಕೆ ಹೊರನಡೆದಳು. ನಾನು 'ಅಲ್ವೇ, ರಾತ್ರಿ ಹೋಮ ಇದೇಂದೆ? ಈಗಲೇ ಹೊರಟ್ಯಲ್ಲಾ?' ಅಂದೆ. 'ನಾನೆಲ್ಲಿ ರಾತ್ರಿ ಅಂದೆ? ಅಯ್ಯೋ, ನಿಮ್ ಕಿವಿಯೇ... ನಾನು ಹೇಳಿದ್ದು ರಾತ್ರಿ ಹೋಮ ಅಂತಲ್ಲಾ, ಮಠದಲ್ಲಿ ಧಾತ್ರಿ ಹೋಮ ಇದೇಂತ' ಅನ್ನುತ್ತಾ ನಗುವುದೇ!... 'ನಂಗೆ ಗೊತ್ತು, ಸುಮ್ಮನೆ ತಮಾಷೆ ಮಾಡ್ದೆ' ಎಂದು ಹೇಳಿ ಬಚಾವಾದೆ!

**ಕೆ.ಪಿ. ಸತ್ಯನಾರಾಯಣ**





## ರೇಡಿಯೊಥೆರಪಿ

ಗೆಳತಿಯ ತಾಯಿಗೆ ಶ್ವಾಸಕೋಶದ ಕ್ಯಾನ್ಸರ್ ಆಗಿತ್ತು. ಅವರನ್ನು ಮಾತನಾಡಿಸಿಕೊಂಡು ಬರಲು ಅವರ ಮನೆಗೆ ಹೋದಾಗ, ಗೆಳತಿಯ ಅಣ್ಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅರ್ಧ ಗಂಟೆಯ ನಂತರ ನನ್ನ ಗೆಳತಿಯ ತಾಯಿ ಮತ್ತು ಅಣ್ಣ ಆಸ್ಪತ್ರೆಯಿಂದ ಬಂದರು. ನನ್ನನ್ನು ನೋಡಿದೊಡನೆ, 'ಅಯ್ಯೋ ಯಾವಾಗ ಬಂದೆ. ತುಂಬ ಹೊತ್ತಾಯ್ತಾ? ಚೆನ್ನಾಗಿದ್ದೀಯಾ?' ಎಂದು ಅವರೇ ಮೊದಲು ನನ್ನನ್ನು ಕೇಳಿದರು. 'ನಾನು ಚೆನ್ನಾಗಿದ್ದೇನೆ, ನೀವು ಹೇಗಿದ್ದೀರಾ?' ಎಂದೆ. 'ಚೆನ್ನಾಗಿದ್ದೀನಿ ಕಣೆ. ಏನೋ ಕಾಯಿಲೆ ಬಂದಿದೆ ನೋಡು' ಎಂದರು. ಅವರಿಗೆ ಕ್ಯಾನ್ಸರ್ ಆಗಿದೆಯೆಂದು ಮನೆಯಲ್ಲಿ ಯಾರೂ ಹೇಳಿರಲಿಲ್ಲ. 'ಆಸ್ಪತ್ರೆಗೆ ಹೋಗಿದ್ದಿರಿಲ್ಲಾ, ಡಾಕ್ಟರ್ ಏನು ಹೇಳಿದರು?' ಎಂದೆ. 'ಆಪರೇಷನ್ ಮಾಡಲಿಕ್ಕೆ ವಯಸ್ಸಾಗಿದೆ ಅದೇನೋ ರೇಡಿಯೊಥೆರಪಿ ಮಾಡಬೇಕಂತೆ. ಲೋ ಸುರೇಶಾ, ಸಂಜೆ ಪೇಟೆಗೆ ಹೋದಾಗ ಒಂದು ರೇಡಿಯೊ ತೆಗೆದುಕೊಂಡು ಬಾರೋ' ಎಂದರು. ನೋವಿನಲ್ಲಿದ್ದವರಿಗೂ ನಗು ಬಂತು.

**ಸು. ವಿಜಯಲಕ್ಷ್ಮೀ**